ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ನಮ್ಮ ಲೋಕಸೇವಾ ಆಯೋಗದವರು ಏನು ನಿಯಮಗಳನ್ನು ಮಾಡುವುದಕ್ಕೆ ಅಧಿಕಾರ ಇದೆ, ಆ ನಿಯಮಗಳ ಪ್ರಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಈಗ ಮಾನ್ಯ ಸದಸ್ಯರು ಒಂದು ಪತ್ರಿಕೆಯಲ್ಲಿ ದೋಷವಾದರೆ ಎಲ್ಲಾ ಪತ್ರಿಕೆಗಳ ಉತ್ತರಗಳನ್ನು ಏಕೆ ಕೈಬಿಡುತ್ತಾರೆಂದು ಕೇಳಿದ್ದಾರೆ. ಕೈ ಬಿಡಬೇಕೆಂದು ನಿಯಮ ಇದೆ. ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದವರೆಗೂ ಹೋಗಿ ಅಪೀಲು ಇತ್ಯಾದಿಗಳು ಹೋಗಿ ಮೇಲ್ಮನವಿಗಳು ಹೋಗಿ ಸರ್ವೋಚ್ಚ ನ್ಯಾಯಾಲಯವು ಲೋಕಸೇವಾ ಆಯೋಗ ಮಾಡಿರುವಂತಹ ನಿಯಮಗಳು ಕ್ರಮಬದ್ಧವಾಗಿದೆ ಎಂದು ತೀರ್ಮಾನ ಕೊಟ್ಟಿದೆ. ಸರ್ಕಾರ ಲೋಕಸೇವಾ ಆಯೋಗಕ್ಕೆ ಹೀಗೆ ಮಾಡಿ, ಹಾಗೆ ಮಾಡಿ ಎಂದು ಹೇಳುವಂತಹ ಅವಕಾಶವಿಲ್ಲ. ಅಂದರೆ ಶಾಸನಬದ್ಧವಾದಂತಹ ಅವಕಾಶವಿಲ್ಲ. ಅದು ಲೋಕಸೇವಾ ಆಯೋಗಕ್ಕೆ ಸೇರಿದಂಥ ಪ್ರತ್ಯೇಕವಾದಂತಹ ಹಕ್ಕು. ಅದರ ಪ್ರಕಾರ ಅವರು ಹಕ್ಕನ್ನು ಚಲಾಯಿಸುತ್ತಾರೆ. ಅದರಲ್ಲಿ ನಾವು ಹಸ್ತಕ್ಷೇಪ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪಿ. ಬಸವರಾಜ್.—ಇಂತಹ ತಪ್ಪುಗಳನ್ನು ೧೯೭೬ರ ಮತ್ತು ೧೯೯೧ರ ಪರೀಕ್ಷೆಯಲ್ಲಿ ಮಾಡಿದವರಿಗೆ ಪಜಾ ಮಾಡಲಾಗಿದೆ. ಆದರೆ ೧೯೯೩ರ ಪರೀಕ್ಷೆಯಲ್ಲಿ ಅಂಥ ತಪ್ಪು ಮಾಡಿದವರನ್ನು ಪಜಾ ಮಾಡಲಿಲ್ಲ. ಅದರ ಅರ್ಥ ಈಗ ಆಯೋಗದವರು ಅವರಿಗೆ ಸರಿಕಂಡ ಹಾಗೆ ಮಾಡಬಹುದೆಂದು ಅರ್ಥವೇ? ಸರ್ಕಾರದವರು ಇದರ ಕಡೆಗೆ ಗಮನ ಹರಿಸಬೇಕೆಂದು ಕೇಳುತ್ತಿದ್ದೇನೆ. ೧೯೯೩ರ ಪರೀಕ್ಷೆಯಲ್ಲಿ ಇಂತಹ ತಪ್ಪು ಮಾಡಿದವರನ್ನು ಪಜಾ ಮಾಡಲಿಲ್ಲ. ಅದನ್ನು ತಾವು ತರಿಸಿಕೊಂಡು ಪರೀಕ್ಷೆ ಮಾಡಿ ನೋಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಇದು ಲೋಕಸೇವಾ ಆಯೋಗದ ವಿವೇಚನೆಗೆ ಬಿಟ್ಟಂತಹ ವಿಚಾರ. ಯಾವ ವರ್ಷದಲ್ಲಿ ಅವರು ಯಾವರೀತಿ ಆಚರಣೆ ಮಾಡುತ್ತಾರೆ ಎಂದು ನಾವು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಅವಕಾಶ ಇಲ್ಲ.

ಖಾಸಗಿ ಗೃಹ ನಿರ್ಮಾಣ ಸಹಕಾರಿ ಸಂಘಗಳ ಮೂಲಕ ಅನಧಿಕೃತ ಬಡಾವಣೆಗಳು

೨೧೦ (೪೩೩) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಖಾಸಗಿ ಗೃಹ ನಿರ್ಮಾಣ ಸಂಘಗಳು ಅನಧಿಕೃತವಾಗಿ ಲೇಔಟ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ ಅದನ್ನು ತಡೆಗಟ್ಟುವಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ?

ಇ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು ?

ಈ) ಈ ರೀತಿಯಾಗಿ ಅವ್ಯವಸ್ಥಿತ ಹಾಗೂ ಅನಧಿಕೃತ ಗೃಹ ನಿರ್ಮಾಣಗಳಿಂದ ನಗರದ ಬೆಳವಣಿಗೆಗೆ ಭಾರಿ ಸಮಸ್ಯೆಗಳು ಬಂದು ತನ್ಮೂಲಕ ಬಗೆಹರಿಸಲಾರದಷ್ಟು ಸಮಸ್ಯೆಗಳು ಉದ್ಭವವಾಗುವುದರಿಂದ ಕೂಡಲೇ ಕ್ರಮ ತೆಗೆದುಕೊಂಡು ಇಂಥ ಅನಧಿಕೃತ ಚಟುವಟಿಕೆಗಳು ನಡೆಯದಂತೆ ಸರ್ಕಾರವು ಕ್ರಮ ಕೈಗೊಳ್ಳಲಿಚ್ಛಿಸುತ್ತದೆಯೇ ?

ಉ) ಇಂಥಹ ಚಟುವಟಿಕೆಗಳಲ್ಲಿ ತೊಡಗಿರುವ ಅನಧಿಕೃತ ಗೃಹ ನಿರ್ಮಾಣ ಸಂಸ್ಥೆಗಳ ಹೆಸರುಗಳನ್ನು ಸರ್ಕಾರದವರು ಸಂಗ್ರಹಿಸಿದ್ದಾರೆಯೇ ಸಂಗ್ರಹಿಸಿದ್ದಲ್ಲಿ ಅವುಗಳ ಹೆಸರುಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು). ಇವರ ಪರವಾಗಿ ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಕೆಲವು ಅನಧಿಕೃತ ಗೃಹ ನಿರ್ಮಾಣ ಸಹಕಾರ ಸಂಘಗಳು ಮತ್ತು ಅಧಿಕೃತವಲ್ಲದ ಖಾಸಗಿ ಗೃಹ ನಿರ್ಮಾಣ ಸಂಘಗಳು ಅನಧಿಕೃತ ಬಡಾವಣೆಗಳನ್ನು ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಈ) ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

ಉ) ಈಗಾಗಲೇ ಇಂಥಹ ಚಟುವಟಿಕೆಗಳಲ್ಲಿ ತೊಡಗಿದ್ದ ಕೆಳಗೆ ಸೂಚಿಸಿದ ೧೩ ಖಾಸಗಿ ಗೃಹ ನಿರ್ಮಾಣ ಸಂಘಗಳು ಮತ್ತು ಅಧಿಕೃತ ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲೆ ಕ್ರಮ ತೆಗೆದು ಕೊಳ್ಳಲಾಗಿದೆ:

೧. ಟೆಲಿಕಮ್ಯೂನಿಕೇಷನ್ ಎಂಪ್ಲಾಯಿಸ್ ಹೆಚ್‌ಬಿಸಿಎಸ್.
೨. ಕುವೆಂಪು ಹೆಚ್‌ಬಿಸಿಎಸ್.
೩. ಗವಿಪುರಂ ಹೆಚ್‌ಬಿಸಿಎಸ್.
೪. ಹೆಚ್.ಜಿ.ಇ.ಎಫ್. ಹೆಚ್‌ಬಿಸಿಎಸ್.
೫. ವೆಂಕಟೇಶ್ವರ ಹೆಚ್‌ಬಿಸಿಎಸ್,
೬. ಕೇಂದ್ರ ಉಪಾಧ್ಯಾಯ ಸಂಘ
೭. ಅಟ್ಟೂರ್ ಹೆಚ್‌ಬಿಸಿಎಸ್.
೮. ಬೆಟ್ಟಹಳ್ಳಿ ಹೆಚ್‌ಬಿಸಿಎಸ್,
೯. ಹೊರಮಾವು ಹೆಚ್‌ಬಿಸಿಎಸ್.
೧೦. ಕರ್ನಾಟಕ ಪವರ್ ಕಾರ್ಪೊರೇಷನ್ ಹೆಚ್‌ಬಿಸಿಎಸ್.
೧೧. ಹೆಚ್.ಎ.ಎಲ್. ಎಂಪ್ಲಾಯಿಸ್ ಹೆಚ್‌ಬಿಸಿಎಸ್.
೧೨. ಮನ್‌ಜೋಗ್ ಹೆಚ್‌ಬಿಸಿಎಸ್.
೧೩. ವೈಯಾಲಿಕಾವಲ್ ಹೆಚ್‌ಬಿಸಿಎಸ್.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಖಾಸಗೀ ಗೃಹ ನಿರ್ಮಾಣ ಸಹಕಾರ ಸಂಘಗಳು ಪ್ರೈವೇಟ್ ಲೇಔಟ್ ಮಾಡುತ್ತಿದ್ದಾರೆಯೇ ಎಂದು ಕೇಳಿದ್ದೆ. ಅದಕ್ಕೆ ೧೩ ಖಾಸಗೀ ಗೃಹ ನಿರ್ಮಾಣ ಸಹಕಾರ ಸಂಘಗಳವರು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದರೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೆ, ಇದು ಬರೀ ೧೩ ಸಂಘಗಳು ಅಲ್ಲ. ಇನ್ನೂ ಅನೇಕ ಗೃಹ ನಿರ್ಮಾಣ ಸಹಕಾರಿ ಸಂಘಗಳು ಸರ್ಕಾರದ ಒಪ್ಪಿಗೆ ಇಲ್ಲದೆ ಅಸ್ತಿತ್ವಕ್ಕೆ ಬಂದಿವೆ. ಸಹಕಾರಿ ಇಲಾಖೆಯವರು ಈ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಿಸಿದ್ದಾರೆ. ನಮ್ಮ ಬೆಂಗಳೂರು [illegible] ವೃದ್ಧಿ ಪ್ರಾಧಿಕಾರಕ್ಕೆ ಬ [illegible] ಸಂಘಗಳವರು ಈಗಾಗಲೇ ಮು [illegible] ವುದಕ್ಕಾಗಲಿ, ರಸ್ತೆ [illegible] ಡುವುದಾಗ [illegible] ಆಥವಾ ಇತ್ಯಾದಿ ಕೆಲಸಗಳನ್ನು ಮಾಡುವುದಕ್ಕೆ ತ [illegible] ಹಾಕಿದೆ. ಈ ವಿಷಯ ನನಗಿಂತ ಹೆಚ್ಚಾಗಿ ಪ್ರಾಧಿಕಾರದ ಸದಸ್ಯರಾದ ನಿಮಗೇ ಗೊತ್ತಿದೆ. ಇದರಲ್ಲಿ ಏನಾದರೂ ಅಕ್ರಮಗಳು ನಡೆದಿದ್ದರೆ ಸರ್ಕಾರದ ಗಮನಕ್ಕೆ ಅವುಗಳನ್ನು ತಂದರೆ ತೀವ್ರ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ.—ಅವರು ಸರಾಗವಾಗಿ ಅಲ್ಲಿ ಲೇಔಟ್‌ಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಮತ್ತು ತಡೆದಿಲ್ಲ. ಅವರು ಸಹಕಾರಿ ಇಲಾಖೆಯ ಅನುಮತಿ ತೆಗೆದುಕೊಂಡಿದೆ ಮತ್ತು ಮಂಡಲ್ ಪಂಚಾಯಿತಿಯಿಂದ ಪ್ಲಾನ್ ತೆಗೆದುಕೊಂಡಿದೆ ಎಂದು

ಹೇಳಿ ಬಿ.ಡಿ.ಎ. ಅಧಿಕಾರಿಗಳಿಗೆ ಭಯ ಹುಟ್ಟಿಸಿ ಈ ಕೆಲಸ ನಡೆಸುತ್ತಿದ್ದಾರೆ. ಇದೆಲ್ಲಾ ಕಾನೂನು ರೀತಿಯಲ್ಲಿ ನಡೆಯುತ್ತಿಲ್ಲ. ಇದರ ಚಟುವಟಿಕೆ ಕಾನೂನು ಬಾಹಿರವಾಗಿ ನಡೆಯುತ್ತಿದೆ. ಈ ಗುತ್ತಿಗೆದಾರರನ್ನು ಟಾಡಾ ಕಾಯಿದೆ ಮೇಲೆ ಬಂಧಿಸಬೇಕು. ಈಗ ಅಲ್ಲಿ ಏನೇನು ವಾಹನಗಳು ಇದೆ ಅವನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಸುಮಾರು ೨೦-೩೦ ಸಾವಿರ ಎಕರೆಯಲ್ಲಿ ಈ ರೀತಿಯಲ್ಲಿ ಮಾಡುತ್ತಿದ್ದಾರೆ. ನೀವು ಹೇಳಿದ ಹಾಗೆ ೧೩ ಸಂಘಗಳು ಅಲ್ಲಿ. ೫೫ ಸೊಸೈಟಿಗಳು ಅದರಲ್ಲಿ ಸೇರಿವೆ. ದಯಮಾಡಿ ಅದನ್ನು ತಡೆಯದಿದ್ದರೆ ಬೆಂಗಳೂರು ನಗರ ಹದಗೆಡುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೂಡ

ಏನು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ತಮ್ಮ ಸರ್ಕಾರ ಈಗಲೇ ಆದೇಶ ಕೊಟ್ಟು ಅವರನ್ನು ಬಂಧಿಸತಕ್ಕಂತಹ ವ್ಯವಸ್ಥೆ ಮಾಡಬೇಕು. ಅವರ ವಾಹನಗಳಾದ ಟ್ರ್ಯಾಕ್ಟರ್‌ಗಳು, ಬುಲ್ಡೋಜರ್‌ಗಳ ಮೂಲಕ ಬಹಳ ಬೃಹದಾಕಾರವಾಗಿ ಅಲ್ಲಿ ಕೆಲಸಗಳು ನಡೆಯುತ್ತಿವೆ. ಅವರಿಗೆ ಯಾರ ಗಮನವೂ ಇಲ್ಲ. ಮತ್ತು ಅಲ್ಲಿ ಟ್ಯಾಂಕ್ ಕಟ್ಟುತ್ತಿದ್ದಾರೆ. ಅದಕ್ಕೆ ಬಿಡಬ್ಲ್ಯೂಎಸ್‌ಎಸ್‌ಬಿಯಿಂದ ಅನುಮತಿ ಇಲ್ಲ. ಸರ್ಕಾರದ ಮತ್ತು ಪ್ರಾಧಿಕಾರದಭಯ ಇಲ್ಲ. ತಾವು ಇದರ ಬಗ್ಗೆ ಆಶ್ವಾಸನೆ ಕೊಟ್ಟು ತಕ್ಷಣವೇ ಅವರನ್ನು ಬಂದಿಸತಕ್ಕಂತಹ ಮತ್ತು ವಾಹನಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಬಗ್ಗೆ ಉತ್ತರದಲ್ಲಿಯೇ ತಿಳಿಸಲಾಗಿದೆ, ಅನೇಕ ಅನಧಿಕೃತ ಗೃಹನಿರ್ಮಾಣ ಸಂಘಗಳನ್ನು ಮನಸೋ ಇಚ್ಛೆ ಬೆಂಗಳೂರಿನ ಸುತ್ತಮುತ್ತ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಪಂಚಾಯಿತಿಗಳ ಜೊತೆ ಒಂದು ಒಪ್ಪಂದಕ್ಕೆ ಬಂದಿದ್ದಾರೆಂದು ಒಂದು ರೀತಿಯಲ್ಲಿ ಹೇಳಬಹುದು. ಅಕ್ರಮವಾಗಿ ಬೆಂಗಳೂರು ಪ್ರಾಧಿಕಾರದ ಒಪ್ಪಿಗೆ ಇಲ್ಲದೇ ಪ್ರಾಧಿಕಾರದ ಪರಿಧಿಯೊಳಗೆ ಹೀಗೆ ಮಾಡುತ್ತಿದ್ದಾರೆ.—ಸರ್ಕಾರದ ಅಭಿಪ್ರಾಯದಲ್ಲಿ ಪ್ರಾಧಿಕಾರ ಹೆಚ್ಚು ಚುರುಕಾಗಬೇಕು. ಈ ರೀತಿ ಚುರುಕಾಗಿ ಎಲ್ಲೆಲ್ಲಿ ಇಂತಹ ಅನಧಿಕೃತ ಬಡಾವಣೆ ಬರುತ್ತಿದೆ ಅದನ್ನು ನಿಲ್ಲಿಸಬೇಕು. ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದ ಸಹಾಯ ಬೇಕಾದರೆ ಸರ್ಕಾರಕ್ಕೆ ಅವರು ತಿಳಿಸಬೇಕು. ಈ ಕೆಲಸವನ್ನು ಸೂಕ್ತವಾಗಿ ಮಾಡುವುದಕ್ಕೆ ಪ್ರಾಧಿಕಾರಕ್ಕೆ ನಾವು ತಿಳಿಸುತ್ತೇವೆ.

ಶ್ರೀ ಕೆ. ಲಕ್ಕಣ್ಣ.—ಪ್ರಾಧಿಕಾರದವರು ಕ್ರಮ ತೆಗೆದುಕೊಳ್ಳುವುದಕ್ಕೆ ಅವರು ಏನು ಹೇಳುತ್ತಾರೆಂದರೆ ಪಂಚಾಯಿತಿಯಿಂದ ಪ್ಲಾನ್ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಸರ್ಕಾರದ ಸಹಕಾರಿ ಇಲಾಖೆಯ ಜಮೀನನ್ನು ನಾವು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಸರ್ಕಾರ ಅದಕ್ಕೆ ಸೂಚನೆ ಕೊಡಬೇಕು. ತಕ್ಷಣ ಅವರನ್ನು ಸಸ್ಪೆಂಡ್ ಮಾಡುವ ವ್ಯವಸ್ಥೆ ಮಾಡಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ತಾವು ವಿವರಗಳನ್ನು ತಿಳಿಸಿದರೆ ಸರ್ಕಾರವು ಕ್ರಮ ತೆಗೆದುಕೊಳ್ಳುವುದಕ್ಕೆ ನಿರ್ಧಾರ ತೆಗೆದುಕೊಳ್ಳುತ್ತದೆ.

ಪರಾಬೂರಿನಲ್ಲಿ ಪರಿಸರ ಮಾಲಿನ್ಯ ತಡೆ

೨೫೭(೫೦೨) ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್).—ಮಾನ್ಯ ವಿಜ್ಞಾನ, ಯಂತ್ರಕಲೆ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;—

ಅ) ಮಂಗಳೂರಿನ ಪರಾಬೂರಿನಲ್ಲಿ ಬಾಳಾ ಗ್ರಾಮದಲ್ಲಿ ವಿದೇಶಿ ಕಂಪನಿಯೊಂದು ಚರ್ಮಾಗಾರ ಮಾಡುವ ಉದ್ಯಮ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮೆಲ್ಕಂಡ ಉದ್ದಿಮೆಯಿಂದ ವ್ಯಾಪಕವಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎನ್. ಜೆ. ಹಾಲಪ್ಪ (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು, ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು).—

ಅ) ಮಂಗಳೂರಿನ ಪರಾಬೂರಿನ ಬಾಳಾ ಗ್ರಾಮದಲ್ಲಿ ಮೆ : ಬಿ.ಎ.ಎನ್. ಎಫ್. ಇಂಡಿಯಾ ಲಿ. ಎಂಬ ಕಂಪನಿಯು ಚರ್ಮದ ಕಾರ್ಖಾನೆಗೆ ಬೇಕಾಗುವ ಬಣ್ಣ ಹಾಗೂ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ನಿವೇಶನವನ್ನು ಪಡೆದಿದೆ. ಕಾರ್ಖಾನೆಯು ಇನ್ನು ಪ್ರಾರಂಭವಾಗಿಲ್ಲ.